ಶೃತಿ ರಿಗ್ರೆಟ್ ಐಯ್ಯರ್, ಅಮೇರಿಕಾ

ಅಂದು ಕಾಗೆ ಕೂಗಿದರೆ ನೆಂಟರು ಬರುತ್ತಾರೆನ್ನುತ್ತಿದ್ದರು. ಕಾಗೆಗಳು ವಿರಳವಾದ ಇಂದು ಕೂಗುವವರಾರು?



ಕಾಲಿಂಗ್ ಬೆಲ್ಲು, ಕೈಯಲ್ಲಿನ ಸೆಲ್ಲು.

ವಿ.ಎಸ್. ಗುರುಶಿವಮೂರ್ತಿ, ಬೆಂಗಳೂರು

‘ಶ್ರೀರಾಮಾಯಣ ದರ್ಶನಂ’ ಓದಿದರೆ ಶ್ರೀರಾಮನ ದರ್ಶನ ಆಗತ್ತಾ?

ಕುವೆಂಪು ಕಂಡ ‘ರಾಮತನ’ ನಿಶ್ಚಿತವಾಗಿ ಗೋಚರಿಸುತ್ತದೆ.

ಬಿ. ಚಂದ್ರೇಗೌಡ, ಬೆಂಗಳೂರು

ಹೆಣ್ಣನ್ನು ವನಿತೆ ಎಂದು ಕರೆಯುವುದೇಕೆ?

ಅದು ಸಂಸಾರದ ನೊಗ ಹೊತ್ತ ‘ವಂದಿತೆ’ ಎಂಬುದರ ಅಪಭ್ರಂಶವಂತೆ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ

ಕೆಲವರು ಊಟ ಮಾಡುವಾಗ, ಮಲಗುವಾಗ ಮೊಬೈಲನ್ನು ಜೊತೆಗೇ ಇರಿಸಿಕೊಳ್ಳುವರಲ್ಲ?



ಮಗುವನ್ನು ದೂರವಿರಿಸುವುದುಂಟೇ! ಮೊಬೈಲ್ ಇಂದಿನವರ ಕೈಮಗು.

ಮಂಡಿ ಕುಮಾರ್, ಬೆಂಗಳೂರು

ಮದುವೆ, ಮಕ್ಕಳು, ಸಂಸಾರ, ಸಮಸ್ಯೆ, ಜೀವನ ಎಲ್ಲವೂ ಮೂರು ಅಕ್ಷರಗಳೇ ಏಕೆ?

ಲಗ್ನ, ಪ್ರಜಾ, ವಂಶ, ಕಷ್ಟ, ಬಾಳು ಎಂಬ ಎರಡಕ್ಷರಗಳು ತಿಳಿದಿಲ್ಲವಾದ್ದರಿಂದ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಕಾಗೆ ಯಾವಾಗಲೂ ಬೆಳ್ಳಗಾಗಲ್ಲ. ರಾಜಕೀಯ ನಾಯಕರು?

ಯಾವಾಗಲೂ ತಮ್ಮ ಕಪ್ಪುಹಣವನ್ನು ಬೆಳ್ಳಗಾಗಿಸಲ್ಲ.

ಬಿ. ಬಸವರಾಜ್, ಹರಿಹರ

ಹೆಂಗಸರ ಡ್ರೆಸ್‌ಗಳಿಗೆ ಜೇಬುಗಳು ಇರುವುದಿಲ್ಲ. ಏಕೆ?

‘ಕೊಟ್ಟ ಬಟ್ಟೆ ಡ್ರೆಸ್‌ಗೇ ಸಾಲದು. ಜೇಬಿಗೆಲ್ಲಿ ಬಟ್ಟೆ’ ಎಂದಳಾ ಟೈಲರ್.

ಅಮರಯ್ಯಾ ಪತ್ರಿಮಠ, ಸುರಪುರ

ಚೆನ್ನಾಗಿ ನಿದ್ರೆ ಮಾಡಬೇಕಾದರೆ...?

ಪರಿಶ್ರಮವನ್ನು ಹಾಸಿಕೊಂಡು, ತೃಪ್ತಿಯನ್ನು ಹೊದ್ದುಕೊಳ್ಳಿ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಶ್ವಾನದ ಗುಣ ಮನುಷ್ಯನಲ್ಲಿ ಇದ್ದಿದ್ದರೆ ಹೇಗಿರುತ್ತಿತ್ತು?

ಇದೆಯಲ್ಲ! ಬಿಸ್ಕತ್ ಎಸೆದರೆ ಬಾಲ ಆಡಿಸುವ ಗುಣ ಅನೇಕರಲ್ಲಿ ಹೇರಳವಾಗಿದೆ.

ಪ್ರೀತಿ ಕಿರಣ್, ಬೆಂಗಳೂರು

ಶ್ರೀಕೃಷ್ಣನು ‘ನೈನಂ ಛಿಂದಂತಿ...’ ಎಂದು ಆತ್ಮದ ಬಗ್ಗೆ ಹೇಳಿದ್ದರೂ ‘ಆತ್ಮಹತ್ಯೆ’ ಅದನ್ನು ಸುಳ್ಳಾಗಿಸುತ್ತಿದೆಯಲ್ಲ?

ಸುಳ್ಳೇನಿಲ್ಲ. ‘ಏ ಆತ್ಮವೆ, ದೇಹ ತ್ಯಜಿಸಿ ಮೇಲಕ್ಕೆ ಹತ್ತು’ ಎಂಬುದರ ಹ್ರಸ್ವರೂಪವೇ ಆತ್ಮ‘ಹತ್‌ಏ’.

ಪಿ.ಜೆ. ರಾಘವೇಂದ್ರ, ಮೈಸೂರು

ಮಲತಾಯಿ ಧೋರಣೆಯಂತೆ ಮಲತಂದೆ ಧೋರಣೆ ಇದೆಯೆ?

ಹೂಂ. ಅಭಿಮನ್ಯುವನ್ನು ಯುದ್ಧಕ್ಕೆ ಅಟ್ಟಿದ್ದು ಮಲತಂದೆಯ ಧೋರಣೆಯೇ.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು

ಈಗ ಕಮೆಡಿಯನ್ಸ್ ಲಾಯರ್ ಇಟ್ಟುಕೊಂಡೇ ನಗಬೇಕು, ನಗಿಸಬೇಕೆ ರಾಮ್?

ಹಾಗೇನಿಲ್ಲ. ಹುಚ್ಚುನಾಯಿಯನ್ನು ತನ್ನತ್ತ ಸೆಳೆಯಬಾರದೆಂಬ ಅರಿವಿರಬೇಕಷ್ಟೆ.

ಮೀನಾಕ್ಷಿ ರಾಮಗುಂಡಿ, ಬೈಲಹೊಂಗಲ

ಬದುಕಲು ಸಂಪತ್ತು ಮುಖ್ಯವೋ, ಆರೋಗ್ಯ ಮುಖ್ಯವೋ?

ಇಲ್ಲಿನ ಪಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಂತೂ ರೋಗಿಗೆ ಆರೋಗ್ಯ, ವೈದ್ಯನಿಗೆ ರೋಗಿಯ ಸಂಪತ್ತು ಮುಖ್ಯ!

## ಬಹುಮಾನಿತ ಪ್ರಶ್ನೆ

ಬೂಕನಕೆರೆ ವಿಜೇಂದ್ರ, ಮೈಸೂರು

ಪುರೋಹಿತರೇಕೆ ಅರೆಬೆತ್ತಲೆಯಲ್ಲಿ ದೇವಸ್ಥಾನದಲ್ಲಿ ದೇವರನ್ನು ಪೂಜಿಸುವುದು?

ಗರ್ಭಗುಡಿಯ ಕತ್ತಲಲ್ಲಿ ಉಂಟಾಗುವ ವಿಟಮಿನ್ ಡಿ ಕೊರತೆಯನ್ನು ಬೆಳಕಲ್ಲಿ ನಿವಾರಿಸಿಕೊಳ್ಳಲು.

ಕಾವ್ಯಶ್ರೀ, ಶೋರಾಪುರ

ದೀರ್ಘಾಯುಷ್ಯದ ಗುಟ್ಟೇನು?

ಬಂದಿದ್ದೆಲ್ಲವನ್ನೂ, ತಿಂದಿದ್ದೆಲ್ಲವನ್ನೂ ನೆಮ್ಮದಿಯಿಂದ ಅರಗಿಸಿಕೊಳ್ಳುವುದು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ತಗ್ಗಿದ್ದಲ್ಲಿ ನೀರು. ದುಡ್ಡಿದ್ದಲ್ಲಿ?

ಮೊದಲು ತಗ್ಗಿ ನಂತರ ಕಾಲೆಳೆಯುವ ಮಂದಿ.

ಎಸ್ಸೆನ್ಕೆ, ಕಡೂರು

ದುಡ್ಡು ಗಿಡದಲ್ಲಿ ಬಿಡುವಂತಿದ್ದರೆ ಏನಾಗುತ್ತಿತ್ತು?



‘plant insurance company’ಗಳು ಉದ್ಧಾರವಾಗುತ್ತಿದ್ದವು.

ಕೆ.ವಿ. ಶಿವಕುಮಾರ್, ಮೈಸೂರು

ಕೆಲವರು ಕಷ್ಟಗಳ ಸುಳಿಯಲ್ಲಿ ನೊಂದು ಬೆಂದರೂ ಖುಷಿಯಾಗಿರುತ್ತಾರಲ್ಲಾ?

ದುಃಖವು ಸೀರಿಯಲ್ಲಿಗೂ, ನಗೆಯು ರಿಯಲ್ಲಿಗೂ ಸೂಕ್ತವೆಂದರಿತ ವಿವೇಕಿಗಳವರು.

ಕೆ.ಎಂ. ವಿಭೂತಿ, ಹರಿಹರ

ಇಲ್ಲೊಬ್ಬರಿಗೆ ಅರವತ್ತರಲ್ಲೂ ಮತ್ತೆ ಪ್ರೇಮ ಅರಳುತ್ತಿದೆ. ಕಾರಣವೇನಿರಬಹುದು?

ಅವರು ಮಾಡಿಸಿರುವ ದೊಡ್ಡ ಮೊತ್ತದ ವಿಮೆ ಎಂದಳಂತೆ ಪ್ರೇಯಸಿ.

ಫಾಲನೇತ್ರ ಸಜ್ಜನ, ಶಿರಸಿ

ಹಾರುವುದಕ್ಕೂ, ಹಾರಾಡುವುದಕ್ಕೂ ವ್ಯತ್ಯಾಸವೇನು?

ಇದು ಪಕ್ಷಿಗುಣ; ಅದು ಪಕ್ಷಗುಣ.

■ ರಾಮ್